ಡಾ ॥ ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಡಿ. ಪಿ. ಎ. ಪಿ. ಅಡಿಯಲ್ಲಿ ತೆಗೆದುಕೊಂಡಂತಹ ಕಾಮಗಾರಿಗಳು ಇದೇ ರೀತಿಯಾಗಿ ನಮ್ಮ ರಾಜ್ಯದಲ್ಲಿ ಅರ್ಥಕ್ಕೆ ನಿಂತ ಉದಾಹರಣೆಗಳು ಇವೆ. ಅದರ ಸಲುವಾಗಿ ರಸ್ತೆ ರೋಕೋ ಕೂಡ ಕೆಲವೊಂದು ಕಡೆಗಳಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಡಿ. ಪಿ. ಎ. ಪಿ. ಅಡಿಯಲ್ಲಿ ತೆಗೆದುಕೊಂಡಂತಹ ಏತ ನೀರಾವರಿ ಯೋಜನೆಗಳನ್ನು 1987ರಲ್ಲಿ ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡಿದ್ದಾರೆ. ನಿಜವಾಗಿಯೂ ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ಇದನ್ನು ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡಿದೆ. ಚಿಕ್ಕನೀರಾವರಿ ಖಾತೆಗೆ ವಹಿಸಿಕೊಡಬೇಕಾಗಿತ್ತು. ಆದರೆ ಏಕೆ ಕೊಟ್ಟಿಲ್ಲವೋ ಗೊತ್ತಾಗಲಿಲ್ಲ. 1987ನೇ ಇಸವಿಯಲ್ಲಿ ಸರ್ಕಾರ ಈ ಎರಡೂ ಏತ ನೀರಾವರಿ ಯೋಜನೆಗಳನ್ನು ಜಿಲ್ಲಾಪರಿಷತ್ತಿಗೆ ವಹಿಸಿಕೊಟ್ಟಿರುವುದರಿಂದ 1983-84ರ ಆಯವ್ಯಯದಲ್ಲಿ ಇದನ್ನು ಸೇರಿಸಿ ಆದಷ್ಟು ಶೀಘ್ರವಾಗಿ ಮಾಡಿಕೊಡಲಿಕ್ಕೆ ಜಿಲ್ಲಾಪರಿಷತ್ತಿಗಳಿಗೆ ಆದೇಶ ನೀಡಲಾಗಿದೆ. 5 ಲಕ್ಷಕ್ಕಿಂತ ಹೆಚ್ಚಿನ ಅಂದಾಜು ಇರುವ ಕಾಮಗಾರಿಗಳನ್ನು ಡಿ.ಪಿ.ಎ.ಪಿ. ಅಡಿಯಲ್ಲಿ ಮುಂದುವರಿಸಬಾರದು ಎಂದು ಭಾರತ ಸರ್ಕಾರದ ಸೂಚನೆ ಕೂಡ ಇರುವುದರಿಂದ ಒಂದು ಗೊಂದಲಮಯ ವಾತಾವರಣ ಉಂಟಾಗಿದೆ. ಇದರ ಸಲುವಾಗಿ ವೈಜ್ಞಾನಿಕ ನಿಲುವು ತಳೆಯಬೇಕಾಗಿದೆ. ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಇದರಲ್ಲಿ, ವೈಜ್ಞಾನಿಕ ತೀರ್ಮಾನ ಏನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೂಡ ಸದನದಲ್ಲಿದ್ದಾರೆ. ಈ ರೀತಿ ಅರ್ಧಂಬರ್ಧ ಆಗಿರುವಂತಹ ಕಾಮಗಾರಿಗಳಿಗೆ ಸುಮಾರು 20-30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಪೂರ್ಣಗೊಳಿಸಬಹುದು. ಈಗ ಸರ್ಕಾರ 60 ಕೋಟಿ ರೂ.ಗಳನ್ನು ಖರ್ಚು ಮಾಡಿ ಇನ್ನು 20 ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಈ ಕಾಮಗಾರಿಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸೆಪರೇಟ್ ಬಜೆಟ್ ಪ್ರಾವಿಜನ್ ಮಾಡಬೇಕಾಗುತ್ತದೆ. ಇದನ್ನು ನೀರಾವರಿ ಇಲಾಖೆಗೆ ವಹಿಸಿ ಮುಗಿಸಿಕೊಡಬೇಕಾಗುತ್ತದೆ. ಇವತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಇದು ಮೈನರ್ ಇರಿಗೇಷನ್‌ಗೆ ಟ್ರಾನ್ಸ್‌ಫರ್ ಆಗಿದೆ ಎಂದು ಹೇಳುತ್ತಾರೆ. ಅದಕ್ಕೆ ಬಜೆಟ್ ಪ್ರಾವಿಜನ್ ಮಾಡಿಲ್ಲ. ಅದಕ್ಕೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ತಾವು ಈ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಈ ಮಧ್ಯೆ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ. ಇದನ್ನು ಜಿಲ್ಲಾಪರಿಷತ್ ವತಿಯಿಂದ ಮಾಡಿಕೊಡುತ್ತೀರೋ ಅಥವಾ ನಿಮ್ಮ ಇಲಾಖಾವತಿಯಿಂದ ಮಾಡಿಕೊಡುತ್ತೀರೋ ಎಂದು ಸ್ಪಷ್ಟವಾಗಿ ಹೇಳಬೇಕು.

ಡಾ ॥ ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತು ಮಾಡಿಕೊಡದಿದ್ದರೆ ಯಾವ ಯಾವ ಕಾಮಗಾರಿಗಳನ್ನು ಮಾಡಿಕೊಟ್ಟಿರುವುದಿಲ್ಲ. ಅದರ ಪಟ್ಟಿ ಕಳುಹಿಸಿಕೊಡಿ. ನಮ್ಮ ಇಲಾಖಾ ವತಿಯಿಂದ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 8-3-93ರ ಲಿಖಿತ ಮೂಲಕ ಉತ್ತರಿಸುವ 14ನೇ ಪಟ್ಟಿಯಲ್ಲಿರತಕ್ಕಂಥ 101 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 1779, 1782, 1724, 1636, 1715, 1775, 1722, 1122, 545, 600, 1018, 895, 783, 9, 1380, 743, 521, 497, 670, 219, 220, 1472, 1473, 489, 171, 1785, 964, 1034, 1035, 1634, 1632, 1637, 1075, 1071, 1073, 1783, 1784, 1449, 1450, 1635, 1423, 1421, 1422 ಮತ್ತು 1424 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನೂ ಉಳಿದ 58 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ : ಚೆನ್ನೆಗಂ - ಧೂಳಖೇಡ ಸೇತುವೆ ಮತ್ತು ರಸ್ತೆ ಕಾಮಗಾರಿ.

Q : 1780

ಶ್ರೀ ಮನೋಹರ ಯು. ಐನಾಪುರ (ಒಳ್ಳೊಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚೆನ್ನೆಗಾಂ - ಧೂಳಖೇಡ ಸೇತುವೆ ಮತ್ತು ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವ ವಿಷಯವು ನಿಜವೆ.

ಆ) ಹಾಗಿದ್ದಲ್ಲಿ, 1992-93ರ ಸಾಲಿನಲ್ಲಿ ಖರ್ಚು ಮಾಡಿರುವ ಹಣ

ಇ) ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳು.

ಈ) ಸರ್ಕಾರವು, ಈ ಮೇಲಿನ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದಕ್ಕೆ ನಿರ್ಲಕ್ಷಿತ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಈ ಕಾಮಗಾರಿಯು ವಿಜಾಪುರ ಜಿಲ್ಲಾಪರಿಷತ್ತು ವ್ಯಾಪ್ತಿಯಲ್ಲಿ ಬರುತ್ತದೆ ಮತ್ತು ದಿನಾಂಕ : 26-8-92ರಲ್ಲಿ ಜಿಲ್ಲಾಪರಿಷತ್ತಿನವರು ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದಲೇ ಕೈಗೊಳ್ಳುವಂತೆ ಕೋರಿರುತ್ತಾರೆ. ಈ ದಿಸೆಯಲ್ಲಿ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಕಾಮಗಾರಿಯು ಜಿಲ್ಲಾಪರಿಷತ್ತು ವ್ಯಾಪ್ತಿಯಲ್ಲಿದ್ದು ದಿನಾಂಕ : 28-8-92ರಂದು ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದಲೇ ಕೈಗೆತ್ತಿಕೊಳ್ಳುವಂತೆ ತಿಳಿಸಿರುತ್ತಾರೆ. ಹಾಗೂ ಈ ಕಾಮಗಾರಿಯು 1992-93ನೇ ಸಾಲಿನ ಆಯವ್ಯಯದಲ್ಲಿ ಸೇರಿಸುವಾಗ ಬೆಳಗಾಂ ವೃತ್ತದ ಪಟ್ಟಿಯಲ್ಲಿ ಸೇರಿಸದೇ, ತಪ್ಪಾಗಿ ಗುಲ್ಬರ್ಗಾ ವಿಭಾಗದ ಪಟ್ಟಿಯಲ್ಲಿ ಸೇರಿರುವುದರಿಂದ ತೊಂದರೆಯಾಗಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.